0601

**Sixth Semester of three Year LL.B. Degree Examination, June 2013**
**LAW OF EVIDENCE**

Duration : 3 Hours Max. Marks : 100

**Instructions** : 1. Answer all **5** Questions.
2. **One** essay type and **one** short note question or problem from **each Unit** have to be attempted.
3. Figures to the **right** indicate marks.
4. Answers should be written **either** in English or Kannada **completely**.

**UNIT – I**

Q. No. 1. (a) Define and discuss fact, facts in issue and relevant fact. Marks : 15

ವಾಸ್ತವಿಕತೆ, ವಿವಾದ ವಾಸ್ತವಿಕತೆಗಳು ಮತ್ತು ಸುಸಂಬಂಧ ವಾಸ್ತವಿಕತೆಗಳನ್ನು ವ್ಯಾಖ್ಯಾನಿಸಿ ಮತ್ತು ಚರ್ಚಿಸಿರಿ.

OR/**ಅಥವಾ**

What is admission ? Who can make admissions ?

ಒಪ್ಪಿಗೆಗಳೆಂದರೇನು ? ಒಪ್ಪಿಗೆಗಳು ಯಾರು ಮಾಡಬಹುದು ?

(b) Write a note on Doctrine of Res Gestae. Marks : 5

'ರೆಸ್ ಗೆಸ್ತೆ' ಸಿದ್ಧಾಂತದ ಕುರಿತು ಲಘು ಟಿಪ್ಪಣಿ ಬರೆಯಿರಿ.

OR/**ಅಥವಾ**

The question is whether 'A' committed a crime at Calcutta on certain day. The fact that, on that day, 'A' was at Lahore. Is this fact relevant ?

ಒಂದು ದಿನಸ 'ಅ' ನು ಕಲ್ಕತ್ತಾದಲ್ಲಿ ಒಂದು ಅಪರಾಧವನ್ನೆಸಗಿದ್ದಾನೆ ಎನ್ನುವ ಒಂದು ಪ್ರಶ್ನೆ ಇದೆ. ಅದೇ ದಿವಸ 'ಅ' ಲಾಹೋರದಲ್ಲಿದ್ದನು ಎಂಬುದು ಒಂದು ಸಂಗತಿಯಾಗಿದೆ. ಈ ಸಂಗತಿಯು ಸುಸಂಬದ್ಧವೇ ?

## UNIT – II

Q. No. 2. (a) What is confession ? Whether confession made before police is admissable in evidence ? Marks : 15

ತಪ್ಪೊಪ್ಪಿಗೆ ಎಂದರೇನು ? ಪೋಲಿಸರ ಮುಂದೆ ಕೊಟ್ಟ ತಪ್ಪೊಪ್ಪಿಗೆ ಸಾಕ್ಷಿ ಅಂಗೀಕಾರವೇ ?

OR/ಅಥವಾ

What is meant by dying declaration ? Explain its evidentiary value.

ಮರಣೋನ್ಮುಖ ಘೋಷಣೆ ಎಂದರೇನು ? ಅದರ ಸಾಕ್ಷ್ಯಿಯ ಮೌಲ್ಯವನ್ನು ವಿವರಿಸಿರಿ.

(b) The question is whether a given road is a public way or not. Does the statement by 'A' a deceased headman of the village that "The road was public". Is this statement relevant ? Marks : 5

ಒಂದು ರಸ್ತೆಯು ಸಾರ್ವಜನಿಕ ರಸ್ತೆಯೋ ಅಥವಾ ಅಲ್ಲವೋ ? ಎನ್ನುವುದು ಪ್ರಶ್ನೆ ''ರಸ್ತೆಯು ಸಾರ್ವಜನಿಕವಾದದ್ದು'' ಎನ್ನುವ ಗ್ರಾಮದ ಮುಖಂಡನ ಹೇಳಿಕೆಯು ಸುಸಂಬದ್ದವೇ ?

OR/ಅಥವಾ

'A' was called to police station for interrogation. During interrogation 'A' complained of severe stomach pain. He was taken to hospital in a police van, while in hospital, he confessed to a doctor that the committed robbery. Is the confession admissible ?

'ಅ' ನನ್ನು ವಿಚಾರಣೆಗಾಗಿ ಪೋಲೀಸ್ ಠಾಣೆಗೆ ಕರೆಸಲಾಯಿತು. ವಿಚಾರಣೆಯ ಸಮಯದಲ್ಲಿ 'ಅ' ನು ಹೊಟ್ಟೆನೋವಿದೆಯೆಂದು ದೂರಿದನು. ಪೋಲೀಸ್ ವಾಹನದಲ್ಲಿ ಅವನನ್ನು ಆಸ್ಪತ್ರೆಗೆ ಸೇರಿಸಲಾಯಿತು. ಆಸ್ಪತ್ರೆಯಲ್ಲಿರುವಾಗ ತಾನು ಸುಲಿಗೆ ಮಾಡಿರುವುದಕ್ಕಾಗಿ ವೈದ್ಯರೆದುರು ತಪ್ಪೊಪ್ಪಿಗೆ ನೀಡಿದನು. ಈ ತಪ್ಪೊಪ್ಪಿಗೆಯು ಅಂಗೀಕಾರಕ್ಕೆ ಯೋಗ್ಯವೇ ?

## UNIT – III

Q. No. 3. (a) What are Public Documents ? State how public documents are proved ? Marks : 15

ಸಾರ್ವಜನಿಕ ದಸ್ತಾವೇಜುಗಳಾವುವು ? ಸಾರ್ವಜನಿಕ ದಸ್ತಾವೇಜುಗಳನ್ನು ಹೇಗೆ ಸಾಬೀತು ಪಡಿಸಬಹುದು ?

OR/ಅಥವಾ

What is "hearsay evidence" ? Are there any exceptions to this rule ? If so enumerate them.

''ವದಂತಿ ಸಾಕ್ಷ್ಯ'' ಎಂದರೇನು ? ಇದಕ್ಕೇನಾದರೂ ಅಪವಾದಗಳಿವೆಯೇ ? ಒಂದು ವೇಳೆ ಇದ್ದರೆ ಅವುಗಳನ್ನು ತಿಳಿಸಿರಿ.

(b) 'A' agrees in writing to pay 'B' of Rs. 10,000/- on 1-3-2012. The fact that, at the same time, an oral agreement was made that the money should not be paid till 31-3-2012. Can this fact be proved ? Marks : 5

'ಅ' ನು 'ಬ' ನಿಗೆ ಹತ್ತು ಸಾವಿರ ರೂಪಾಯಿಯನ್ನು 1–3 –2012 ರಂದು ಕೊಡುವುದಾಗಿ ಬರವಣಿಗೆಯಲ್ಲಿ ಒಪ್ಪಿಕೊಂಡಿರುತ್ತಾನೆ. ಆದರೆ ಅದೇ ಸಮಯದಲ್ಲಿ ಆ ಹಣವನ್ನು 31–3 –2012 ರವರೆಗೆ ಕೊಡಬೇಕಾಗಿಲ್ಲವೆಂದು ಮೌಖಿಕವಾಗಿ ಒಪ್ಪಿಕೊಂಡಿರುವದು. ಈ ಸಂಗತಿಯನ್ನು ರುಜುವಾತು ಪಡಿಸಬಹುದೆ ?

OR/ಅಥವಾ

Write a note on Secondary Evidence.

ದ್ವಿತೀಯಕ ಸಾಕ್ಷಿಯ ಬಗ್ಗೆ ಟಿಪ್ಪಣಿ ಬರೆಯಿರಿ.

## UNIT – IV

Q. No. 4. (a) Define Estoppel. Explain the different kinds of estoppel. Marks : 15

ವಿಬಂಧವನ್ನು ವ್ಯಾಖ್ಯಾನಿಸಿರಿ. ವಿಬಂಧದ ವಿವಿಧ ಪ್ರಕಾರಗಳನ್ನು ವಿವರಿಸಿರಿ.

OR/ಅಥವಾ

Explain the presumptions in cases of dowry deaths and rape cases.

ವರದಕ್ಷಿಣೆ ಸಾವುಗಳು ಮತ್ತು ಅತ್ಯಾಚಾರ ಪ್ರಕರಣಗಳಲ್ಲಿಯ ಪೂರ್ವ ಭಾವನೆಗಳನ್ನು ವಿವರಿಸಿರಿ.

(b) ‘A’ is charged with travelling in a railway without a ticket. ‘A’ denies the charge. On whom the burden of proof lies ?. Marks : 5

‘ಅ’ ನು ಟಿಕೇಟ್ ಇಲ್ಲದೆ ರೈಲಿನಲ್ಲಿ ಪ್ರಮಾಣ ಮಾಡಿದ್ದಾನೆಂದು ಆಪಾದಿಸಲಾಗಿದೆ. ‘ಅ’ ನು ಆರೋಪವನ್ನು ಅಲ್ಲಗಳೆಯುತ್ತಾನೆ. ರುಜುವಾತಿನ ಭಾರ ಯಾರ ಮೇಲಿದೆ ?

OR/ಅಥವಾ

Write a note on presumption of legitimacy of a child.

ಮಗುವಿನ ಧರ್ಮಜತ್ವದ ಕುರಿತು ಇರುವ ಪೂರ್ವಭಾವನೆ ಕುರಿತು ಟಿಪ್ಪಣಿ ಬರೆಯಿರಿ.

## UNIT – V

Q. No. 5. (a) Explain “Examination-in-chief”, “cross-examination” and “Re-examination”. Marks : 15

‘‘ಮುಖ್ಯ ವಿಚಾರಣೆ’’, ‘‘ಪಾಟಿ ಸವಾಲು’’ ಮತ್ತು ‘‘ಮರು ವಿಚಾರಣೆ’’ ಗಳನ್ನು ವಿವರಿಸಿರಿ.

OR/ಅಥವಾ

What are privileged communication ? Explain.

ವಿಶೇಷಾಧಿಕಾರ ಸಂಸೂಚನೆಗಳಾವುವು ? ವಿವರಿಸಿ.

(b) An accused is alleged to have committed the murder of his wife in the presence of his 8 years old son, whether the evidence of child admissible ? Marks : 5

ಆರೋಪಿಯು ತನ್ನ ಹೆಂಡತಿಯನ್ನು 8 ವರ್ಷದ ಮಗುವಿನ ಎದುರಿನಲ್ಲಿ ಕೊಲೆ ಮಾಡುತ್ತಾನೆ. ವಿಚಾರಣೆಯಲ್ಲಿ ಮಗುವಿನ ಸಾಕ್ಷ್ಯ ನೀಡಲಾಗಿದೆ. ಮಗುವಿನ ಸಾಕ್ಷ್ಯವು ಸ್ವೀಕಾರಾರ್ಹವೇ ?

OR/ಅಥವಾ

Write note on Hostile witness.

ಪ್ರತಿಕೂಲ ಸಾಕ್ಷಿದಾರ ಇದರ ಬಗ್ಗೆ ಟಿಪ್ಪಣಿ ಬರೆಯಿರಿ.

---